ಓ.ಎಸ್ಃ 01/18

ಡಿಡಬ್ಲ್ಯೂಃ 2

<u>ದಿನಾಂಕಃ **03-04-2021** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ವಾದಿಯ ಪರವಾಗಿ ಶ್ರೀ ಎಲ್.ಎಸ್.ಕೆ. ವಕೀಲರಿಂದಃ</u>**

ಈ ದಾವೆಯು ಒಂದೇ ಜಮಿನಿನ ಮೇಲೆ ನಡೆದಿರುತ್ತದೆ. ಆ ಜಮಿನಿನ ಪೂರ್ವಕ್ಕೆ ಅಡಿವೆಪ್ಪ ಜಮಿನು, ಪಶ್ಚಿಮಕ್ಕೆ ನರಸಯ್ಯ ರವರ ಜಮಿನು, ಉತ್ತರಕ್ಕೆ ನಿಂಗಪ್ಪ ರವರ ಜಮಿನು, ದಕ್ಷಿಣಕ್ಕೆ ಮರೆಪ್ಪ ರವರ ಜಮಿನು ಇರುತ್ತದೆ. ದಾವಾ ಜಮಿನಿನ ಸರ್ವೆ ನಂ . 201 ಇರುತ್ತದೆ. ನನ್ನ ಹೆಸರಿಗೆ ಜಮಿನುಗಳು ಇರುತ್ತವೆ. ಅದರ ಸರ್ವೆ ನಂ. 274 ಇರುತ್ತದೆ. ಅದು 4 ಎಕರೆ ಇರುತ್ತದೆ. ವಾದಿಯ ತಾತನ ಮತ್ತು ಅಜ್ಜಿಯ ಹೆಸರು ನನಗೆ ಗೊತ್ತಿರುವುದಿಲ್ಲ. ವಾದಿಯ ಹೆಂಡತಿಯ ಹೆಸರು ನನಗೆ ಗೊತ್ತಿರುವುದಿಲ್ಲ. ವಾದಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮತ್ತು ದಾವಾ ಜಮಿನಿನ ನಡುವೆ 4 ಜಮಿನುಗಳ ಅಂತರ ಇರುತ್ತದೆ. 1 ನೇ ಪ್ರತಿವಾದಿ ಮತ್ತು ನಾನು ಬೇರೆ ಬೇರೆ ಇರುತ್ತವೆ. ನನ್ನ ಮತ್ತು 1 ನೇ ಪ್ರತಿವಾದಿಯ ಮನೆಗಳು ಅಕ್ಕಪಕ್ಕ ಇರುತ್ತವೆ. 1 ನೇ ಪ್ರತಿವಾದಿಯು ನನಗೆ ಬಹಳ ಆತ್ಮಿಯ ಇರುತ್ತಾನೆ ಎಂದರೆ ಸರಿ. ದಾವಾ ಜಮಿನಿನ ಕಬ್ಜೆಯಲ್ಲಿ ವಾದಿ ಇರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗೆ ಯಾವುದೇ ಸಂಬಂಧ ಇರದೆ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಯ ದಾವಾ ಜಮಿನಿನ ಕಬ್ಜೆಯಲ್ಲಿ ಇರುವ ವಿಷಯ ಗೊತ್ತಿದ್ದರೂ ಸಹ 1 ನೇ ಪ್ರತಿವಾದಿಯ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರಧಾನ ಜೆಎಂಎಫ್‌ಸಿ ನ್ಯಾಯಾಧೀಶರು
ಶಹಾಪೂರ .